ಸಣ್ ಸುದ್ದಿ

ಇಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಉಡುಪಿ ಪ್ರವಾಸ

ಮಂಗಳೂರು: ರಾಜ್ಯ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ರಿತು ರಾಜ್ ಅವಸ್ಥಿ ಫೆ.19ರಂದು ದ.ಕ. ಜಿಲ್ಲೆಯ ಪ್ರವಾಸ ಕೈಗೊಂಡಿದ್ದಾರೆ. ಫೆ.18ರ ರಾತ್ರಿ 8.50ಕ್ಕೆ ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸುವ ಅವರು ನಗರದಲ್ಲಿ ವಾಸ್ತವ್ಯ ಮಾಡುವರು. ಫೆ.19ರಂದು ಬೆಳಗ್ಗೆ 9.15ಕ್ಕೆ ಮಂಗಳೂರಿನಿಂದ ಉಡುಪಿಗೆ ತೆರಳುವರು. ಸಂಜೆ 6.30ಕ್ಕೆ ಮಂಗಳೂರಿಗೆ ಆಗಮಿಸಿ, ರಾತ್ರಿ 8.45ಕ್ಕೆ ಮಂಗಳೂರಿ ನಿಂದ ವಿಮಾನ ಮೂಲಕ ಬೆಂಗಳೂರಿಗೆ ತೆರಳುವರು ಎಂದು ಹೈಕೋರ್ಟ್‌ನ ಶಿಷ್ಟಾಚಾರ ವಿಭಾಗದ ಪ್ರಕಟಣೆ ತಿಳಿಸಿದೆ.

ಪುತ್ತೂರು ತಹಸೀಲ್ದಾರ್ ಗ್ರಾಮ ವಾಸ್ತವ್ಯ ಇಂದು

ಪುತ್ತೂರು: ತಾಲೂಕು ತಹಸೀಲ್ದಾರ್ ಟಿ. ರಮೇಶ್ ಬಾಬು ಶನಿವಾರ ಪುತ್ತೂರು ತಾಲೂಕಿನ ಮುಂಡೂರು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಸಭಾಭವನದಲ್ಲಿ ಗ್ರಾಮ ವಾಸ್ತವ್ಯ ಕಾರ್ಯಕ್ರಮ ನಡೆಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಚಿವ ಈಶ್ವರಪ್ಪ ವಜಾಕ್ಕೆ ಆಗ್ರಹಿಸಿ ಬ್ಲಾಕ್ ಕಾಂಗ್ರೆಸ್ ಪ್ರತಿಭಟನೆ

ಈಶ್ವರಪ್ಪ ವಜಾಗೊಳಿಸದಿದ್ದಲ್ಲಿ ಉಗ್ರ ಪ್ರತಿಭಟನೆ-ಅಭಯಚಂದ್ರ ಜೈನ್ ಎಚ್ಚರಿಕೆ

- **ಕನ್ನಡಪ್ರಭ ವಾರ್ತೆ** ಮೂಲ್ಕಿ

ಕೆಂಪುಕೋಟೆಯಲ್ಲಿ ಕೇಸರಿ ಧ್ವಜವನ್ನು ಹಾರಿಸಬೇಕು ಎಂಬ ಹೇಳಿಕೆ ನೀಡಿರುವ ಸಚಿವ ಕೆ. ಈಶ್ವರಪ್ಪ ರವರನ್ನು ರಾಜ್ಯದ ಮುಖ್ಯಮಂತ್ರಿಗಳು ಸಚಿವ ಸಂಪುಟದಿಂದ ವಜಾಗೊಳಿಸಬೇಕು ಹಾಗೂ ಪೊಲೀಸರು ಅವರನ್ನು ಬಂಧಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಮತ್ತಷ್ಟು ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಮಾಜಿ ಸಚಿವ ಕೆ. ಅಭಯಚಂದ್ರ ಜೈನ್ ಹೇಳಿದರು.

ರಾಷ್ಟ್ರಧ್ವಜಕ್ಕೆ ಅಪಮಾನ ಮಾಡಿದ ಸಚಿವ ಈಶ್ವರಪ್ಪ ಅವರನ್ನು ಸಚಿವ ಸ್ಥಾನದಿಂದ ವಜಾ ಗೊಳಿಸಲು ಹಾಗೂ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಮೂಲ್ಕಿ ಬ್ಲಾಕ್ ಕಾಂಗ್ರೆಸ್ ನೇತೃತ್ವದಲ್ಲಿ ಮೂಲ್ಕಿಯ ತಹಸೀಲ್ದಾರ್ ಕಚೇರಿ ಎದುರು ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಯುವ ಕಾಂಗ್ರೆಸ್ ನಾಯಕ ಮಿಥುನ್ ರೈ ಮಾತನಾಡಿ, ಈಶ್ವರಪ್ಪ ಸಚಿವ ಸಂಪುಟದಲ್ಲಿ ಇರಲು ಅನರ್ಹ ವ್ಯಕ್ತಿಯಾಗಿದ್ದು, ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಈಶ್ವರಪ್ಪರ ವಿರುದ್ಧ ಘೋಷಣೆ ಕೂಗಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ರಾಜ್ಯಪಾಲರಿಗೆ ಮೂಲ್ಕಿ ತಹಸೀಲ್ದಾರ್ ಮೂಲಕ ಮನವಿ ಸಲ್ಲಿಸಲಾಯಿತು.

ಸಚಿವ ಈಶ್ವರಪ್ಪ ವಜಾಕ್ಕೆ ಆಗ್ರಹಿಸಿ ಮೂಲ್ಕಿ ಬ್ಲಾಕ್ ಕಾಂಗ್ರೆಸ್ ಪ್ರತಿಭಟನೆ ನಡೆಸಿತು.

ಮೂಲ್ಕಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೋಹನ್ ಪಿ. ಕೋಟ್ಯಾನ್, ಕೆಪಿಸಿಸಿ ಕೋ ಆರ್ಡಿನೇಟರ್ ಎಚ್. ವಸಂತ್ ಬೆರ್ನಾಡ್, ಬ್ಲಾಕ್ ಉಪಾಧ್ಯಕ್ಷ ಹಸನಬ್ಬ ಬಾಳ, ಜಿಲ್ಲಾ ಡಾಕ್ಟರ್ ಸೆಲ್ ಅಧ್ಯಕ್ಷ ಡಾ. ಶೇಖರ್ ಅಮೀನ್ ಬಜ್ಪೆ, ಮೂಲ್ಕಿ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪದ್ಮಾವತಿ ಶೆಟ್ಟಿ, ಯುವ ಕಾಂಗ್ರೆಸ್ ಅಧ್ಯಕ್ಷ ಅಶೋಕ್ ಪೂಜಾರ್, ಬ್ಲಾಕ್ ಕೋಶಾಧಿಕಾರಿ ಅಶ್ವಿನ್ ಆಳ್ವ, ಮೂಲ್ಕಿ ಪ್ರಜಾ ಪ್ರತಿನಿಧಿ ಸಮಿತಿ ಅಧ್ಯಕ್ಷ ಜನಾರ್ದನ ಬಂಗೇರ, ಬಜ್ಪೆ ಪ್ರಜಾ ಪ್ರತಿನಿಧಿ ಅಧ್ಯಕ್ಷ ಬಿ.ಜೆ. ರಹೀಂ, ಕಿನ್ನಿಗೋಳಿ ಪ್ರಜಾಪ್ರತಿನಿಧಿ ಅಧ್ಯಕ್ಷ ಪ್ರಮೋದ್ ಕುಮಾರ್, ಅತಿಕಾರಿಬೆಟ್ಟು ಪ್ರಜಾಪ್ರತಿನಿಧಿ ಅಧ್ಯಕ್ಷ ಶೇಖರ್ ಕೊಲಕಾಡಿ, ಹಳೆಯಂಗಡಿ ಪ್ರಜಾಪ್ರತಿನಿಧಿ ಅಧ್ಯಕ್ಷ ಧನ್ ರಾಜ್ ಕೋಟ್ಯಾನ್, ಬಳ್ಕುಂಜೆ ಪ್ರಜಾಪ್ರತಿನಿಧಿ ಅಧ್ಯಕ್ಷ ನೆಲ್ಸನ್ ಲೋಬೋ, ಎಕ್ಕಾರು ಪ್ರಜಾಪ್ರತಿನಿಧಿ ಅಧ್ಯಕ್ಷ ಸ್ಟ್ಯಾನಿ ಮಿರಾಂದ, ಸೂರಿಂಜೆ ಪ್ರಜಾಪ್ರತಿನಿಧಿ ಅಧ್ಯಕ್ಷ ಅಬ್ದುಲ್ ರಜಾಕ್, ಜೋಕಟ್ಟೆ ಪ್ರಜಾಪ್ರತಿನಿಧಿ ಅಧ್ಯಕ್ಷ ಸಿರಾಜ್, ಮೂಲ್ಕಿ ನಗರ ಪಂಚಾಯಿತಿ ಸದಸ್ಯರಾದ ಯೋಗೀಶ್ ಕೋಟ್ಯಾನ್, ಮಂಜುನಾಥ್ ಕಂಬಾರ್, ಬಾಲಚಂದ್ರ ಕಾಮತ್, ಪುತ್ತುಬಾವ, ಮಹೇಶ್ ಮುನ್ನಾ ಮತ್ತಿತರರಿದ್ದರು.

ಈಶ್ವರಪ್ಪ ವಿರುದ್ಧ ದೇಶದ್ರೋಹದ ಕೇಸು ದಾಖಲಿಸಲು ಆಗ್ರಹಿಸಿ ಪ್ರತಿಭಟನೆ

- **ಕನ್ನಡಪ್ರಭ ವಾರ್ತೆ** ಮೂಡುಬಿದಿರೆ

ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿರುವ ಸಚಿವ ಈಶ್ವರಪ್ಪ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಿ, ಅವರ ಮೇಲೆ ದೇಶ ದ್ರೋಹದ ಕೇಸ್ ದಾಖಲಿಸುವಂತೆ ಆಗ್ರಹಿಸಿ ಮೂಡುಬಿದಿರೆ ಬ್ಲಾಕ್ ಕಾಂಗ್ರೆಸ್ ವತಿಯಿಂದ ತಾಲೂಕು ಕಚೇರಿ ಎದುರು ಶುಕ್ರವಾರ ಪ್ರತಿಭಟನೆ ನಡೆಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಕಾಂಗ್ರೆಸ್ ಯುವಮುಖಂಡ ಮಿಥುನ್ ರೈ ಮಾತನಾಡಿ, ಈಶ್ವರಪ್ಪ ಅವರು ಕೆಂಪು ಕೋಟೆಯಲ್ಲಿ ರಾಷ್ಟ ಧ್ವಜವನ್ನು ಇಳಿಸಿ ಕೇಸರಿ ಧ್ವಜವನ್ನು ಹಾರಿಸುತ್ತೇವೆ ಎಂಬ ಹೇಳಿಕೆ ನೀಡಿರುವುದು ರಾಷ್ಟ ಧ್ವಜಕ್ಕೆ ಅವಮಾನ ಮಾಡಿದಂತೆ. ಬಿಜೆಪಿಯವರು ಏರಿಸುವ ಕೇಸರಿ ಧ್ವಜವನ್ನು ಇಳಿಸಿ ನಾವು ರಾಷ್ಟಧ್ವಜವನ್ನು ಹಾರಿಸುವ ಮೂಲಕ ನಮ್ಮ ರಾಷ್ಟಪ್ರೇಮವನ್ನು ತೋರಿಸುವುದು ಖಂಡಿತ ಎಂದರು.

ಈಶ್ವರಪ್ಪ ಪ್ರತಿಕೃತಿಗೆ ಚಪ್ಪಲಿಯಲ್ಲಿ ಹೊಡೆದು ದಹಿಸಲಾಯಿತು. ನಂತರ ತಹಸೀಲ್ದಾರ್ ಪುಟ್ಟರಾಜು ಅವರ ಮೂಲಕ ಮನವಿಯನ್ನು ಸಲ್ಲಿಸಲಾಯಿತು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಲೇರಿಯನ್ ಸಿಕ್ವೇರ, ಯುವ ಕಾಂಗ್ರೆಸ್ ಅಧ್ಯಕ್ಷ ಜಯ ಕುಮಾರ್ ಶೆಟ್ಟಿ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸುಪ್ರಿಯಾ ಶೆಟ್ಟಿ, ಪುರಸಭಾ ಸದಸ್ಯರಾದ ಸುರೇಶ್ ಕೋಟ್ಯಾನ್, ಕೊರಗಪ್ಪ, ಜೊಸ್ಸಿ ಮಿನೇಜಸ್, ಸುರೇಶ್ ಪ್ರಭು, ಪುರಂದರ ದೇವಾಡಿಗ, ಹಿಮಾಯತ್ತುಲ್, ಇಕ್ಬಾಲ್ ಕರೀಂ, ಪುತ್ತಿಗೆ ಗ್ರಾ.ಪಂ. ಅಧ್ಯಕ್ಷ ಪ್ರವೀಣ್ ಶೆಟ್ಟಿ, ಸದಸ್ಯರಾದ ಮುರಳೀಧರ ಕೋಟ್ಯಾನ್, ಪುರುಷೋತ್ತಮ ನಾಯಕ್, ಯುವ ಕಾಂಗ್ರೆಸ್ ಅಧ್ಯಕ್ಷ ಚಂದ್ರಹಾಸ ಸನಿಲ್, ಪುರಸಭಾ ಮಾಜಿ ಅಧ್ಯಕ್ಷೆ ಹರಿಣಾಕ್ಷಿ ಸುವರ್ಣ, ಮುಖಂಡರಾದ ರಾಜೇಶ್ ಕಡಲಕೆರೆ, ನಿತಿನ್ ಬೆಳುವಾಯಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮೂಡುಬಿದಿರೆ ಕಾಂಗ್ರೆಸ್‌ನಿಂದ ಈಶ್ವರಪ್ಪ ವಿರುದ್ಧ ಪ್ರತಿಭಟನೆ ನಡೆಯಿತು.

ದಲಿತ ಕುಟುಂಬ ವಿಮಾ ಮೊತ್ತ ಕಬಳಿಸಿದ ವಕೀಲನಿಗೆ ಜೀವಾವಧಿ ಶಿಕ್ಷೆ

ಉಡುಪಿ: ನಕಲಿ ದಾಖಲೆಗಳನ್ನು ಸೃಷ್ಟಿಸಿ ಅಪಘಾತ ವಿಮಾ ಪರಿಹಾರವನ್ನು ಲಪಟಾಯಿಸಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಉಡುಪಿಯ ವಕೀಲರೊಬ್ಬರಿಗೆ ಉಡುಪಿ ಜಿಲ್ಲಾ ನ್ಯಾಯಾಲಯ ಜೀವಾವಧಿ ಶಿಕ್ಷೆಯನ್ನು ವಿಧಿಸಿ ತೀರ್ಪು ನೀಡಿದೆ.

ವಕೀಲ ಅಲೆವೂರು ಪ್ರೇಮರಾಜ ಕಿಣಿ ಅವರು ವಿನಯಕುಮಾರ್ ಮತ್ತು ಹರಿಶ್ಚಂದ್ರ ಆಚಾರ್ಯ ಎಂಬವರೊಂದಿಗೆ ಸೇರಿಕೊಂಡು ಬೆಳ್ತಂಗಡಿ ತಾಲೂಕಿನ ನಾರಾವಿಯ ದಲಿತ ಕೂಲಿ ಕಾರ್ಮಿಕ ಸಾಧು ಮತ್ತು ಕುಟುಂಬಕ್ಕೆ ವಂಚಿಸಿ ಸುಮಾರು 2.50 ಲಕ್ಷ ರು. ಅಪಘಾತ ವಿಮಾ ಪರಿಹಾರವನ್ನು ಲಪಟಾಯಿಸಿದ ಬಗ್ಗೆ ಉಡುಪಿ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿತ್ತು.

ನಾರಾವಿಯ ಕಡಂಬಿಲದ ದಲಿತ ಕೂಲಿ ಕಾರ್ಮಿಕ ಚಂಬು ಎಂಬವರ ಪತ್ನಿ ಕುಂದಾದು ಅವರು 2002ರ ಮೇ 13ರಂದು ಕೊಲ್ಲೂರಿಗೆ ತೆರಳುತ್ತಿದ್ದಾಗ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದರು. ಅವರಿಗೆ ಜಿಲ್ಲಾ ನ್ಯಾಯಾಲಯವು 1,33,246 ರು. ಪರಿಹಾರ ಕೊಡಿಸಿತ್ತು. ಪರಿಹಾರ ಮೊತ್ತ ಕಡಿಮೆಯಾಯಿತು ಎಂದು ಸಂತ್ರಸ್ಥರ ಕುಟುಂಬ ಹೈಕೋರ್ಟಿಗೆ ಮೇಲ್ಮನವಿ ಸಲ್ಲಿಸಿತ್ತು. ಹೈಕೋರ್ಟ್ 2,57,549 ರು. ಪರಿಹಾರ ನೀಡುವಂತೆ ವಿಮಾ ಕಂಪನಿಗೆ ಆದೇಶಿಸಿತ್ತು. ಈ ಹಂತದಲ್ಲಿ ಆರೋಪಿಗಳು ನಕಲಿ ದಾಖಲೆಗಳನ್ನು ಸೃಷ್ಟಿಸಿ, ವಿಮಾ ಕಂಪನಿ, ನ್ಯಾಯಾಲಯ, ಬ್ಯಾಂಕುಗಳನ್ನು ವಂಚಿಸಿ, ಈ ಸಂತ್ರಸ್ಥ ಕುಟುಂಬಕ್ಕೆ ಸೇರಬೇಕಾಗಿದ್ದ ಪರಿಹಾರವನ್ನು ಲಪಟಾಯಿಸಿದ್ದರು. ಇದನ್ನು ತಿಳಿದು ಸಂತ್ರಸ್ಥ ಕುಟುಂಬ ಪುನಃ ಉಡುಪಿ ಜಿಲ್ಲಾ ನ್ಯಾಯಾಲಯದ ಮೊರೆ ಹೋಗಿದ್ದರು. ನ್ಯಾಯಾಲಯ ವಿಚಾರಣೆ ನಡೆಸಿ ಮುಖ್ಯ ಆರೋಪಿ ಪ್ರೇಮರಾಜ ಕಿಣಿ ಅವರಿಗೆ ಜೀವಾವಧಿ ಮತ್ತು ವಿಜಯಕುಮಾರ್ ಅವರಿಗೆ 7 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ. ಇನ್ನೊಬ್ಬ ಆರೋಪಿ ಹರಿಶ್ಚಂದ್ರ ಆಚಾರ್ಯ ಮೃತಪಟ್ಟಿದ್ದಾರೆ.

ನಿವೃತ್ತ ಹೆಲ್ತ್ ಇನ್‌ಸ್ಪೆಕ್ಟರ್ ಸುರೇಂದ್ರ ಮಯ್ಯ ನಿಧನ

ಬಂಟ್ವಾಳ: ಬಿ.ಸಿ. ರೋಡ್‌ನಲ್ಲಿ ಸ್ಕೂಟರ್‌ನಲ್ಲಿ ಸಂಚರಿಸುತ್ತಿದ್ದ ವೇಳೆ ಸ್ಕಿಡ್ ಆಗಿ ಗಾಯಗೊಂಡಿದ್ದ ನಿವೃತ್ತ ಹೆಲ್ತ್ ಇನ್‌ಸ್ಪೆಕ್ಟರ್, ಬಿ.ಸಿ.ರೋಡ್ ನಿವಾಸಿ ಸುರೇಂದ್ರ ಮಯ್ಯ (71) ಚಿಕಿತ್ಸೆಗೆ ಸ್ಪಂದಿಸದೆ ಶುಕ್ರವಾರ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಪತ್ನಿ, ನಿವೃತ್ತ ಮುಖ್ಯ ಶಿಕ್ಷಕಿ ಇಂದಿರಾ ಸಹಿತ ಇಬ್ಬರು ಪುತ್ರರನ್ನು ಅಗಲಿದ್ದಾರೆ. ಬಂಟ್ವಾಳ ತಾಲೂಕಿನ ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸುಮಾರು 37 ವರ್ಷಗಳ ಕಾಲ ಕರ್ತವ್ಯ ಸಲ್ಲಿಸಿದ್ದ ಅವರು ಫೆ.6ರಂದು ಬಿ.ಸಿ.ರೋಡಿನ ಲಯನ್ಸ್ ಸೇವಾ ಮಂದಿರ ಮುಂಭಾಗ ಸ್ಕೂಟರ್‌ನಲ್ಲಿ ಮನೆ ಕಡೆ ಹೋಗುತ್ತಿದ್ದ ವೇಳೆ ಸ್ಕಿಡ್ ಆಗಿ ಬಿದ್ದಿದ್ದರು.

ಇಂದು ಯೋಧರಿಗೆ ನಮನ

ಬೆಳ್ತಂಗಡಿ: ಇಲ್ಲಿನ ಶ್ರೀ ಕುತ್ಯಾರು ಸೋಮನಾಥೇಶ್ವರ ದೇವಸ್ಥಾನದ ನಮ್ಮೂರ ಜಾತ್ರೆ ಮಹಾರಥೋತ್ಸವ ಪ್ರಯುಕ್ತ ಯೋಧರಿಗೊಂದು ನಮನ ಹಾಗೂ ಗಾನವೈಭವ ಕಾರ್ಯಕ್ರಮ ಶನಿವಾರ ಸಂಜೆ 6.30ರಿಂದ ಬೆಳ್ತಂಗಡಿ ಸಂತೆಕಟ್ಟೆ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಮುಂಭಾಗ ನಡೆಯಲಿದೆ ಎಂದು ನವಶಕ್ತಿ ಫ್ರೆಂಡ್ಸ್ ಸದಸ್ಯ ಜಗದೀಶ್ ಕನ್ನಾಜೆ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮಾಜಿ ಸೈನಿಕ ಉಮೇಶ್ ಬಂಗೇರ ಕುದ್ದುಲ ಹಾಗೂ ರಮೇಶ್ ಕೆ. ಬಂದಾರು, ಸಮಾಜ ಸೇವಕ ನಾಣ್ಯಪ್ಪ ಗೌಡ ಮಚ್ಚಿನ ಅವರನ್ನು ಸನ್ಮಾನಿಸಲಾಗುವುದು. ಶಾಸಕ ಹರೀಶ್ ಪೂಂಜ, ವಿಧಾನಪರಿಷತ್ ಸದಸ್ಯ ಪ್ರತಾಪ್‌ಸಿಂಹ ನಾಯಕ್, ಉದ್ಯಮಿ, ಬರೋಡ ತುಳು ಸಂಘ ಅಧ್ಯಕ್ಷ ಶಶಿಧರ ಶೆಟ್ಟಿ, ಲಕ್ಷ್ಮೀ ಗ್ರೂಪ್ಸ್ ಮಾಲೀಕ, ಬದುಕು ಕಟ್ಟೋಣ ಬನ್ನಿ ತಂಡದ ಸಂಚಾಲಕ ಮೋಹನ್ ಕುಮಾರ್, ನ.ಪಂ. ಅಧ್ಯಕ್ಷೆ ರಜನಿ ಕುಡ್ವ, ಉಪಾಧ್ಯಕ್ಷ ಜಯಾನಂದ ಗೌಡ, ಮೊದಲಾದವರು ಭಾಗ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಅಂಕಣಕಾರ, ವಾಗ್ಮಿ ಆದರ್ಶ ಗೋಖಲೆ, ವಿಶೇಷ ಉಪನ್ಯಾಸ ನೀಡುವರು. ಗಾನ ವೈಭವ ಕಾರ್ಯಕ್ರಮ ನಡೆಯಲಿದೆ ಎಂದರು. ನವಶಕ್ತಿ ಫ್ರೆಂಡ್ಸ್ ಸದಸ್ಯರಾದ ಸ್ಮಿತೇಶ್ ಎಸ್. ಬಾರ್ಯ, ಪ್ರಕಾಶ್, ಅರವಿಂದ ಕುಮಾರ್, ಸ್ವಸ್ತಿಕ್, ಆದರ್ಶ ಜೈನ್, ಗುರು ಲಾಯಿಲ ಉಪಸ್ಥಿತರಿದ್ದರು.

ಪ್ರಮೀಳಾ ಜೆ. ವಾಜ್‌ಗೆ ಪಿಎಚ್.ಡಿ.

ಉಡುಪಿ: ಇಲ್ಲಿನ ತೆಂಕನಿಡಿಯೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಸಮಾಜಕಾರ್ಯ ಸ್ನಾತಕೋತ್ತರ ವಿಭಾಗದ ಉಪನ್ಯಾಸಕಿ ಪ್ರಮೀಳಾ ಜೆ. ವಾಜ್ ಅವರು ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ ಮಕ್ಕಳ ರಕ್ಷಣಾ ವ್ಯವಸ್ಥೆ ಮತ್ತು ಮಕ್ಕಳ ಅಭಿವೃದ್ಧಿ ಎಂಬ ಮಹಾಪ್ರಬಂಧಕ್ಕೆ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಅವರು ಕಾಲೇಜಿನ ಸಮಾಜಕಾರ್ಯ ಸ್ನಾತಕೋತ್ತರ ವಿಭಾಗ ಮುಖ್ಯಸ್ಥ ಡಾ. ದುಗ್ಗಪ್ಪ ಕಜೆಕಾರ್ ಮಾರ್ಗದರ್ಶನದಲ್ಲಿ ಪ್ರಬಂಧ ಸಿದ್ಧಪಡಿಸಿದ್ದರು.

ಡೀಸೆಲ್ ಮಾರಾಟ ತೆರಿಗೆ ಮರು ಪಾವತಿಗೆ ಅನುದಾನ ಬಿಡುಗಡೆ

ಮಂಗಳೂರು: ಯಾಂತ್ರಿಕ ಮೀನುಗಾರಿಕಾ ದೋಣಿಗಳಿಗೆ ಡೀಸೆಲ್ ಮಾರಾಟ ತೆರಿಗೆ ಮರು ಪಾವತಿ ಯೋಜನೆಯಡಿ 2020-21ನೇ ಸಾಲಿನಲ್ಲಿ ವಾರ್ಷಿಕ 150 ಲಕ್ಷ ಕಿಲೋ ಲೀಟರ್ ಡೀಸೆಲ್ ಮೇಲಿನ ಮಾರಾಟ ತೆರಿಗೆ ಮರು ಪಾವತಿ ಮಾಡಲು ಅವಕಾಶ ನೀಡಲಾಗಿದೆ. ಈ ಯೋಜನೆಯಡಿ ಕಳೆದ ಸಾಲಿನಲ್ಲಿ ಹೆಚ್ಚುವರಿ ಅನುದಾನ ಸೇರಿ ಒಟ್ಟು 127 ಕೋಟಿ ರು. ಬಿಡುಗಡೆಯಾಗಿದ್ದು, 2020ರ ಡಿಸೆಂಬರ್‌ವರೆಗಿನ ಬಿಲ್‌ಗಳನ್ನು ಪಾವತಿಸಲು ಸಾಧ್ಯವಾಗಿದೆ. 2021ರ ಜನವರಿ ಮತ್ತು ಫೆಬ್ರವರಿ ತಿಂಗಳ ಒಟ್ಟು 35.81 ಕೋಟಿ ರು. ಮೀನುಗಾರರಿಗೆ ಪಾವತಿಸಲು ಬಾಕಿ ಉಳಿದಿತ್ತು. ದೋಣಿ ಮಾಲೀಕರು ಪೂರ್ಣ ಮೊತ್ತ ಪಾವತಿಸಿ ಡೀಸೆಲ್ ಖರೀದಿಸಿ ರಾಜ್ಯ ಮಾರಾಟ ತೆರಿಗೆ ಮೊತ್ತ ಮರು ಪಾವತಿಗಾಗಿ ಅನುದಾನದ ನಿರೀಕ್ಷೆಯಲ್ಲಿದ್ದಾರೆ. ಇದೀಗ ಪಾವತಿಗೆ ಬಾಕಿ ಉಳಿದ ಕಳೆದ ಸಾಲಿನ ಜನವರಿ ಮತ್ತು ಫೆಬ್ರವರಿ ತಿಂಗಳ ಬಿಲ್‌ಗಳನ್ನು ಪಾವತಿಸಲು ಅಗತ್ಯ ಅನುದಾನವನ್ನು ಸರ್ಕಾರದಿಂದ ಬಿಡುಗಡೆಗೊಳಿಸಲಾಗಿದೆ. ಈ ಬಗ್ಗೆ ಮೀನುಗಾರರು ಆತಂಕ ಪಡುವ ಅಗತ್ಯ ಇಲ್ಲ ಎಂದು ಬಂದರು, ಮೀನುಗಾರಿಕೆ ಹಾಗೂ ಒಳನಾಡು ಜಲಸಾರಿಗೆ ಸಚಿವ ಎಸ್.ಅಂಗಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

21ರಿಂದ ಜಾತ್ರೋತ್ಸವ

ಮೂಲ್ಕಿ: ಪುನರೂರು ಶ್ರೀ ವಿಶ್ವನಾಥ ದೇವಸ್ಥಾನದಲ್ಲಿ ವರ್ಷಾವಧಿ ಜಾತ್ರಾ ಮಹೋತ್ಸವ ಫೆ.21ರಿಂದ 24ರ ವರೆಗೆ ನಡೆಯಲಿದೆ. ಫೆ.20ರಂದು ಬೆಳಗ್ಗೆ ಶತ ರುದ್ರಾಭಿಷೇಕ, ಸಂಜೆ ದೊಡ್ಡ ರಂಗ ಪೂಜೆ ಬಲಿ, 21ರಂದು ಮಧ್ಯಾಹ್ನ ಧ್ವಜಾರೋಹಣ, ರಾತ್ರಿ ಬಲಿ ಉತ್ಸವ, 22ರಂದು ಮಧ್ಯಾಹ್ನ ಬಲಿ ಉತ್ಸವ, ರಾತ್ರಿ ಹೂವಿನ ಪೂಜೆ, ಬಲಿ ಉತ್ಸವ, ಬಾಕಿಮಾರು ದೀಪ, 26ರಂದು ಕುಜಿಂಗಿರಿ ಶ್ರೀ ರಕ್ತೇಶ್ವರಿ ದೈವಸ್ಥಾನದಲ್ಲಿ ನೇಮೋತ್ಸವ ಜರುಗಲಿದೆ.

CHANGE OF NAME

I, **SAFWAN** (old name), S/o Mohammad, residing at 1-4F, Near Charchi, Gudde Angadi, Udyavara, Udupi Taluk & District, have changed my name to **SAFWAN MOHAMMAD MOIDIN** (new name) for all purposes vide affidavit dated 18-02-2022 sworn before Notary Aravinda Holla, Udupi.

CHANGE OF NAME

I, Sudarshini Ramananda Ameen, W/o Ramananda Sundara, residing at D. No. 15-74, "Sri Durga", Kodavoor, Near Bhajana Mandir, Kanangi, Tenkanidiyoor, Udupi Taluk & District-576106, Karnataka, have changed my Husband's name from **RAMANANDA AMIN** (old name) to **RAMANANDA SUNDARA** (new name) for all purposes vide affidavit dated 18-02-2022 sworn before Notary Murahari K., Udupi.

CHANGE OF NAME

I, **PRADEEP KUMAR** (old name), S/o Vasu Ramappa Suvarna, residing at Door No 14-41 Sugandha Kasturi, Uddina Hitlu, Kodavooru Post, Kodavoor Tenkanidiyur Udupi- 576106, Karnataka, have changed my name to **PRADEEP KOTYAN** (new name) for all purposes vide affidavit dated 18-02-2022 sworn before Notary Aravinda Holla, Udupi.

CHANGE OF NAME

I, **KISHAN SANJEEVA** (old name), S/o Sanjeeva Kanchan, residing at 4-90-1, Anagalli, Kundapura, Udupi District- 576211, Karnataka, have changed my name to **KISHAN SANJEEVA KANCHAN** (new name) for all purposes vide affidavit dated 18-02-2022 sworn before Notary Ananda Bhandary G., Kundapura.

CHANGE OF NAME

I, **JOHN JEROME DSOUZA** (old name), S/o Jerome Dsouza, residing at H. No. 3-42(6A) Jen-Jenson, Behind Post Office, Belle Village, Moodubelle, Udupi District- 576120, Karnataka, have changed my name to **JOHN DSOUZA** (new name) for all purposes vide affidavit dated 16-02-2022 sworn before Notary Aravinda Holla, Udupi.

CHANGE OF NAME

I, **AGNES BABIANA ARANHA** (old name), W/o Michael Antony Aranha, residing at H. No. 4-59 Kattingeri Post, Moodubelle, Udupi District- 576120, Karnataka, have changed my name to **AGNES ARANHA** (new name) for all purposes vide affidavit dated 10-02-2022 sworn before Notary Aravinda Holla, Udupi.

CHANGE OF NAME

I, Kariya Poojary @ Chuvayya Poojary, aged about 65 years, S/o Late. Kunda Poojary , residing at Door No.2-30 D, Maipu House, Marpady Village, Moodbidri Taluk D.K, do hereby state that both **KARIYA POOJARY** & **CHUVAYYA POOJARY** are my name's and refers to me only. This is stated vide Affidavit dated 15.02.2022 before Notary Mallika U N Moodbidri .

PUBLIC NOTICE

One of my clients intends to purchase the non-agricultural immovable property held on warg Right situated in Belma Village of Mangalore Taluk, within the limits of Belma Grama Panchayath and within the registration Sub-District of Mangalore Taluk comprised in RS. No. 69-2B measuring 10 cents in the Eastern Middle portion from Mrs. Valsamma N.S. who acquired the same under a Deed of Sale dated 09/07/1987 executed in her favour by Mrs. Devaki Rai and her children viz. Mr. Ramesh Rai, Mrs. Shakunthala, Mr. Suresh Rai and Mrs. Shobha Rai, registered as Document No. 546/1987-88 of Book 1, Volume 726 @ pages 191-206 on the files of the Sub-Registrar, Mangalore Taluk.

The aforesaid property with its larger extent of 42 cents was originally acquired by Mrs. Devaki and her minor children viz. Master Ramesh Rai, Miss. Shakunthala, Master Suresh Rai and Miss Shobha under Schedule "E" to the Deed of Partition dated 12/12/1963 entered into by them with Mrs. Radhamma and 6 others, registered as Document No. 1312/1963 of Book 1, Volume 26 @ pages 90-98 on the files of the Sub-Registrar, Mangalore Taluk. The General Power of Attorney dated 27/12/1979 executed by the aforesaid Mr. Ramesh Rai in favour of his mother Mrs. Devaki Rai and authenticated by Mr. D. Mohan Rao, Advocate and Notary, Mangalore through which the aforesaid Deed of Sale dated 09/07/1987 was executed is reported to be lost or misplaced and hence not traceable.

Any person/s, Banks, financial institutions or others having any claim/objection/right against the aforesaid Property shall notify the same to me with supporting documents, in writing, within 7 days from the date of this publication, failing which it will be deemed that no claim/objection/right whatsoever subsists on aforesaid Property & my client will proceed with the formalities pertaining to the purchase of the said property.

Mangalore
18/02/2022

Mr. M.P.RAMNATH, M.A. LL.M
ADVOCATE,
NO.5, GROUND FLOOR,
MEDIFAIR COMPLEXM KARANGALPADY,
MANGALORE – 575003.
Off: 0824-2496730, Cell: 9844763906

ನ್ಯಾಯ ವಿಜ್ಞಾನ ಪ್ರಯೋಗಾಲಯ
ಮಡಿವಾಳ, ಬೆಂಗಳೂರು-560068

ರಾಜ್ಯ ನ್ಯಾಯ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು ಇಲ್ಲಿ ಖಾಲಿ ಇರುವ ಉಪ ನಿರ್ದೇಶಕರ, ಸಹಾಯಕ ನಿರ್ದೇಶಕರ, ಹಿರಿಯ ವೈಜ್ಞಾನಿಕ ಅಧಿಕಾರಿ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ಅರ್ಜಿಯನ್ನು ಸಲ್ಲಿಸುವ ಕುರಿತು

ನ್ಯಾಯ ವಿಜ್ಞಾನ ಪ್ರಯೋಗಾಲಯ ಘಟಕದಲ್ಲಿ ಖಾಲಿ ಇರುವ 1 ಉಪ ನಿರ್ದೇಶಕರ ಹುದ್ದೆ, 6 ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಮತ್ತು 20 ಹಿರಿಯ ವೈಜ್ಞಾನಿಕ ಅಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದ್ದು, ಈ ಕೆಳಕಂಡ ವಿದ್ಯಾರ್ಹತೆಗಳನ್ನು/ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

1) ಉಪ ನಿರ್ದೇಶಕರು
1. ವಯೋಮಿತಿ :- ಕನಿಷ್ಠ 18 ವರ್ಷ, ಗರಿಷ್ಠ 65 ವರ್ಷ
2. ವಿದ್ಯಾರ್ಹತೆ :- ಡಾಕ್ಟರೇಟ್ ಪದವಿಯನ್ನು ಭೌತಶಾಸ್ತ್ರ/ರಸಾಯನಶಾಸ್ತ್ರ/ಜೈವಿಕ ತಂತ್ರಜ್ಞಾನ/ಫಾರೆನ್ಸಿಕ್ ಸೈನ್ಸ್/ಜೀವರಸಾಯನಶಾಸ್ತ್ರ/ಫಾರ್ಮಕಾಲಜಿ/ಸಸ್ಯಶಾಸ್ತ್ರ/ಪ್ರಾಣಿಶಾಸ್ತ್ರ/ಸೂಕ್ಷ್ಮಜೀವವಿಜ್ಞಾನ/ಜೀವ ವಿಜ್ಞಾನ ವಿಷಯದಲ್ಲಿ ಪಡೆದಿರಬೇಕು.
3. ಕೆಲಸ ಅನುಭವ:-
ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿಸಲಾಗಿರುವ ಸರ್ಕಾರಿ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ಅಥವಾ ಕೇಂದ್ರ/ರಾಜ್ಯ ಸರ್ಕಾರದಿಂದ ಅಂಗೀಕೃತವಾಗಿರುವ ಸಂಶೋಧನಾ ಸಂಸ್ಥೆಯಲ್ಲಿ ಕನಿಷ್ಠ 5 ವರ್ಷ ಕೆಲಸದ ಅನುಭವವನ್ನು ಸಹಾಯಕ ನಿರ್ದೇಶಕರು ಅಥವಾ ತತ್ಸಮಾನ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿರಬೇಕು.

2) ಸಹಾಯಕ ನಿರ್ದೇಶಕರು
1. ವಯೋಮಿತಿ :- ಕನಿಷ್ಠ 18 ವರ್ಷ, ಗರಿಷ್ಠ 65 ವರ್ಷ
2. ವಿದ್ಯಾರ್ಹತೆ :- ಡಾಕ್ಟರೇಟ್ ಪದವಿಯನ್ನು ರಸಾಯನಶಾಸ್ತ್ರ/ಸೂಕ್ಷ್ಮ ಜೀವವಿಜ್ಞಾನ/ಫಾರ್ಮಕಾಲಜಿ/ಫಾರೆನ್ಸಿಕ್ ಸೈನ್ಸ್/ಭೌತಶಾಸ್ತ್ರ/ಸಮಾನಾಂತರ ವಿದ್ಯಾರ್ಹತೆಯನ್ನು ಪಡೆದಿರಬೇಕು.
3. ಕೆಲಸ ಅನುಭವ:- ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿಸಲಾಗಿರುವ ಸರ್ಕಾರಿ ನ್ಯಾಯ ವಿಜ್ಞಾನ ಪ್ರಯೋಗಾಲಯ ಅಥವಾ ಕೇಂದ್ರ/ರಾಜ್ಯ ಸರ್ಕಾರದಿಂದ ಅಂಗೀಕೃತವಾಗಿರುವ ಸಂಶೋಧನಾ ಸಂಸ್ಥೆಯಲ್ಲಿ ಕನಿಷ್ಠ 5 ವರ್ಷ ಕೆಲಸದ ಅನುಭವವನ್ನು ಹಿರಿಯ ವೈಜ್ಞಾನಿಕ ಅಧಿಕಾರಿ ಅಥವಾ ತತ್ಸಮಾನ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿರಬೇಕು.

3) ಹಿರಿಯ ವೈಜ್ಞಾನಿಕ ಅಧಿಕಾರಿ
1. ವಯೋಮಿತಿ :- ಕನಿಷ್ಠ 18 ವರ್ಷ, ಗರಿಷ್ಠ 65 ವರ್ಷ
2. ವಿದ್ಯಾರ್ಹತೆ :- ಸ್ನಾತಕೋತ್ತರ ಪದವಿಯನ್ನು ಸಸ್ಯಶಾಸ್ತ್ರ/ಪ್ರಾಣಿಶಾಸ್ತ್ರ/ಜೀವರಸಾಯನಶಾಸ್ತ್ರ/ಸೂಕ್ಷ್ಮ ಜೀವವಿಜ್ಞಾನ/ಜೀವ ವಿಜ್ಞಾನ/ರಸಾಯನಶಾಸ್ತ್ರ/ಫಾರ್ಮಕಾಲಜಿ/ಫಾರೆನ್ಸಿಕ್ ಸೈನ್ಸ್/ಭೌತಶಾಸ್ತ್ರ/ಕಂಪ್ಯೂಟರ್ ವಿಜ್ಞಾನ/ಎಲೆಕ್ಟ್ರಾನಿಕ್ಸ್/ಮಾಹಿತಿ ವಿಜ್ಞಾನ/ವಿದ್ಯಾರ್ಹತೆಯನ್ನು ಶೇಕಡ 55 ಅಂಕಗಳನ್ನು ಪಡೆದಿರಬೇಕು.
3. ಕೆಲಸ ಅನುಭವ:-ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿಸಲಾಗಿರುವ ಸರ್ಕಾರಿ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ಅಥವಾ ಕೇಂದ್ರ/ರಾಜ್ಯ ಸರ್ಕಾರದಿಂದ ಅಂಗೀಕೃತವಾಗಿರುವ ಸಂಶೋಧನಾ ಸಂಸ್ಥೆಯಲ್ಲಿ ಕನಿಷ್ಠ 5 ವರ್ಷ ಕೆಲಸದ ಅನುಭವವನ್ನು ವೈಜ್ಞಾನಿಕ ಅಧಿಕಾರಿ ಅಥವಾ ತತ್ಸಮಾನ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿರಬೇಕು

ಈ ಗುತ್ತಿಗೆ ನೇಮಕಾತಿಯು ಪ್ರಾರಂಭಿಕವಾಗಿ ಒಂದು ವರ್ಷದ ಅವಧಿಯದಾಗಿದ್ದು, ಒಂದು ವರ್ಷದ ವಿಸ್ತರಣೆಗೆ ಅವಕಾಶವಿರುತ್ತದೆ. ಸದರಿ ಹುದ್ದೆಯಲ್ಲಿ ಗುತ್ತಿಗೆ ಮೇರೆಗೆ ಕರ್ತವ್ಯ ನಿರ್ವಹಿಸಲು ಇಚ್ಛೆಯುಳ್ಳ ಅರ್ಹ ಅಭ್ಯರ್ಥಿಗಳು ಈ ಜಾಹೀರಾತು ಪ್ರಕಟಗೊಂಡ 20 ದಿನಗಳ ಒಳಗಾಗಿ ಸದಸ್ಯ ಕಾರ್ಯದರ್ಶಿ ಮತ್ತು ನಿರ್ದೇಶಕರು, ನ್ಯಾಯ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು, ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು ಮತ್ತು ಹಿರಿಯ ವೈಜ್ಞಾನಿಕ ಅಧಿಕಾರಿ ಗುತ್ತಿಗೆ ಹುದ್ದೆಗಳ ನೇಮಕಾತಿ ಸಮಿತಿ, ಮಡಿವಾಳ, ಬೆಂಗಳೂರು-560068 ಇಲ್ಲಿಗೆ ತಮ್ಮ ಸೇವಾ ವಿವರಗಳೊಂದಿಗೆ ಅರ್ಜಿಯನ್ನು ಸಲ್ಲಿಸುವಂತೆ ಕೋರಲಾಗಿದೆ.

ಸಹಿ/-
ನಿರ್ದೇಶಕರು
ನ್ಯಾಯ ವಿಜ್ಞಾನ ಪ್ರಯೋಗಾಲಯ
ಬೆಂಗಳೂರು

[illegible]/2021-22

ಕೋವಿಡ್-19 ಆತಂಕ ದೂರ: ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ವ್ಯಕ್ತಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಧಾನ ಇಂಜಿನಿಯರ್ ರವರ ಕಛೇರಿ, ಪಿ.ಆರ್.ಎ.ಎಂ.ಸಿ.,
4ನೇ ಮಹಡಿ, ಪಿ.ಡಬ್ಲ್ಯೂ.ಡಿ., ಅನೆಕ್ಸ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು-560001
ಸಂಖ್ಯೆ: ಪ್ರಇಂ/05/ಪಿಆರ್‌ಎಎಂಸಿ/ರಸು/2021-22/1193/ಕರೆ-2 ದಿನಾಂಕ : 16.02.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಚಿಕ್ಕಬಳ್ಳಾಪುರ ಜಿಲ್ಲೆಯ 01 ಸಂಖ್ಯೆ - ರಸ್ತೆ ಸುರಕ್ಷತಾ ಕಾಮಗಾರಿಗೆ ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಎ.ಎಂ.ಸಿ., ರವರು ರಾಜ್ಯಪಾಲರ ಪರವಾಗಿ ಅಲ್ಪಾವಧಿ ಟೆಂಡರ್‌ಅನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಇ-ಪ್ರೊಕ್‌ನಿಂದ (**www.eproc.karnataka.gov.in**) ದಿನಾಂಕ : **17.02.2022** ನಂತರ ಪಡೆಯಬಹುದಾಗಿರುತ್ತದೆ.

[illegible]/3427/2021-22 ಸಹಿ/- ಕಾರ್ಯಪಾಲಕ ಇಂಜಿನಿಯರ್, ಪಿಆರ್‌ಎಎಂಸಿ

ಕೋವಿಡ್-19 ಆತಂಕ ದೂರ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ವ್ಯಕ್ತಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
(ಅರಣ್ಯ ಇಲಾಖೆ)
ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರ ಕಛೇರಿ,
ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ
ಸುಲ್ತಾನ್ ಷರೀಫ್ ವೃತ್ತ, ಸತ್ತಿ ರಸ್ತೆ, ಚಾಮರಾಜನಗರ-571313
ಕಛೇರಿ: 08226-222059
ಟೆಲಿಫ್ಯಾಕ್ಸ್: 08226-225165 e-mail: dirbrttr@gmail.com
ಸಂಖ್ಯೆ: ಎ1/ಬಿಯುಡಿ/ಟೆಂಟಕಲ್ ಸೋಲಾರ್ ಫೆನ್/ಸಿಆರ್-19/2021-22 ದಿನಾಂಕ: 10-02-2022

ಟೆಂಡರ್ ಪತ್ರಿಕಾ ಪ್ರಕಟಣೆ

2021-22ನೇ ಸಾಲಿನಲ್ಲಿ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ ವಿಭಾಗ ವ್ಯಾಪ್ತಿಯ ವಿವಿಧ ವಲಯಗಳಲ್ಲಿ ಟೆಂಟಕಲ್ ಸೋಲಾರ್ ಫೆನ್ಸ್ ನಿರ್ಮಾಣ ಮಾಡುವ ಸಂಬಂಧ ಇ-ಟೆಂಡರ್ ಪ್ರಕಟಣೆಯನ್ನು **www.eproc.karnataka.gov.in** ವೆಬ್‌ಸೈಟ್‌ನಲ್ಲಿ ಹೊರಡಿಸಿ ಟೆಂಡರನ್ನು ದಿನಾಂಕ: 19-02-2022ರಂದು ಆಹ್ವಾನಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಗೆ ಕಛೇರಿಯ ಸಮಯದಲ್ಲಿ ಸಂಪರ್ಕಿಸಿ ಪಡೆದುಕೊಳ್ಳಬಹುದಾಗಿದೆ.(08226-222059)

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು,
ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ.

ವಾಇಸಂ:ಚಾನಗರ:514:2021-22

ಲೋಕೋಪಯೋಗಿ ಇಲಾಖೆ. ತುಮಕೂರು
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ತುಮಕೂರು.
ಕ್ರಸಂ:ಕಾಇಂ:ಲೋಇವಿ:ತುಮಕೂ:ಇಂ-3:ಟೆಂಡರ್33/2021-22 ದಿನಾಂಕ 15.02.2022

ಟೆಂಡರ್ ಪ್ರಕಟಣೆ ಸಂ.33/2021-22 ದಿನಾಂಕ: 15.02.2022

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 33/2021-22:ದಿನಾಂಕ 15.02.2022 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 04 ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ.367.67ಲಕ್ಷಗಳು, ಹಾಗೂ ಕನಿಷ್ಠ ಮೊತ್ತ ರೂ.8.28 ಲಕ್ಷಗಳು, ಗರಿಷ್ಠ ಮೊತ್ತ ರೂ.5,51,600/-, ಹಾಗೂ ಕನಿಷ್ಠ ಇ.ಎಂ.ಡಿ ಮೊತ್ತ ರೂ.20,800/-, ಅರ್ಹ ಗುತ್ತಿಗೆದಾರರು : 4 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 02 ರಿಂದ 11 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: **28.02.2022** ರ 16.00ಗಂಟೆಗೆ, ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ **15.02.2022 ರಿಂದ 02.03.2022**ರ 16.00ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: **02.03.2022** ರ ಸಂಜೆ 16.00 ಗಂಟೆವರೆಗೆ, ರೂ. 50.00 ಲಕ್ಷಕ್ಕಿಂತ ಮೇಲ್ಪಟ್ಟ ಅಂದಾಜು ಮೊತ್ತದ ಕಾಮಗಾರಿಗಳ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: **03.03.2022** ರ ಸಂಜೆ 16.30 ಗಂಟೆಗೆ, ರೂ.50.00 ಲಕ್ಷಕ್ಕಿಂತ ಕಡಿಮೆ ಅಂದಾಜು ಮೊತ್ತದ ಕಾಮಗಾರಿಗಳ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: **03.03.2022**ರ ಸಂಜೆ 16.30 ಗಂಟೆಗೆ, ರೂ.50.00 ಲಕ್ಷಕ್ಕಿಂತ ಮೇಲ್ಪಟ್ಟ ಅಂದಾಜು ಮೊತ್ತದ ಕಾಮಗಾರಿಗಳ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: **05.03.2022**ರ ಸಂಜೆ 11.00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: www.eproc.karnataka.gov.inರಲ್ಲಿ ಪಡೆಯಬಹುದಾಗಿದೆ.
ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.

DIPR/TUM/656/MCA/2021-22

ಇ-ಹರಾಜು ಸೂಚನೆ ಮತ್ತು ದಿವಾಳಿತನ ಮತ್ತು ಬ್ಯಾಂಕ್ರಪ್ಸಿ ಕೋಡ್, 2016ರಡಿ
ಕೆಎಸ್‌ಎಸ್ ಪೆಟ್ರೋನ್ ಪ್ರವೇಟ್ ಲಿಮಿಟೆಡ್ (ಸಮಾಪನೆ)
CIN: U45400MH2007PTC234297
ನೋಂದಾಯಿತ ಕಛೇರಿ: ಸ್ವಸ್ತಿಕ್ ಛೇಂಬರ್ಸ್, 6ನೇ ಮಹಡಿ, ಸಿಯಾನ್ ಟ್ರಾಂಬೆ ರಸ್ತೆ,
ಚೆಂಬೂರು, ಮುಂಬೈ, ಎಂಹೆಚ್ 400071.
ಹರಾಜಿನ ದಿನಾಂಕ ಮತ್ತು ಸಮಯ: 14.03.2022ರಂದು ಮಧ್ಯಾಹ್ನ 02:00 ರಿಂದ 04:00ರ ವರೆಗೆ
(ಜೊತೆಗೆ 5 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ)

ಕೆಎಸ್‌ಎಸ್ ಪೆಟ್ರೋನ್ ಪ್ರವೇಟ್ ಲಿಮಿಟೆಡ್ (ಕಾರ್ಪೊರೇಟ್ ಡೆಟರ್)- ಇದರ ಆಸ್ತಿಗಳ ಮಾರಾಟ ಸಮಾಪನದಾರರು, ಇವರಿಂದ ರಚಿತವಾದ ಸಮಾಪನ ಎಸ್ಟೇಟ್‌ನ ಒಂದು ಭಾಗ, ಸಮಾಪನದಾರರನ್ನು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯ ಮಂಡಳಿ ಇದರ 27.12.2019ರ ಆದೇಶದಂತೆ ನೇಮಕಗೊಂಡಿದ್ದಾರೆ. ಆಸ್ತಿಗಳ ಮಾರಾಟದ ಹರಾಜನ್ನು ಕೆಳಕಂಡ ಇ-ಹರಾಜು ವೇದಿಕೆ https://ncltauaction.auctiontiger.net ಮೂಲಕ ನಡೆಸಲಾಗುತ್ತವುದು. ಹರಾಜು ಮಾಡಬೇಕಿರುವ ಆಸ್ತಿಗಳ ವಿವರ ಅವುಗಳ ಮೀಸಲು ಬೆಲೆ, ಇಎಂಡಿ ಮತ್ತು ಬಿಡ್ ಹೆಚ್ಚಳದ ಮೊತ್ತ ಇವುಗಳನ್ನು ಕೆಳಕಂಡ ಪಟ್ಟಿಯಲ್ಲಿ ನೀಡಲಾಗಿದೆ.

ಆಸ್ತಿಗಳು	ಮೀಸಲು ಬೆಲೆ (ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ. ಗಳಲ್ಲಿ) ಸಲ್ಲಿಸಲು ಕಾಲಮಿತಿ	ಬಿಡ್ ಹೆಚ್ಚಳದ ಮೊತ್ತ (ರೂ.ಗಳಲ್ಲಿ)
ಕಾರ್ಪೊರೇಟರ್ ಸಾಲಗಾರರ ಆಸ್ತಿ ಜೆಬಿಎಫ್ ಇಂಡಸ್ಟ್ರೀಸ್ ಲಿ., ಪಿಟಿಎ ಪ್ಲಾಂಟ್ ಪ್ರಾಜೆಕ್ಟ್ ನಿವೇಶನ ಐಪಿ ಸಂ. 9, ಗ್ರಾಮ- ಬಜ್ಪೆ, ಮಂಗಳೂರು ಎಸ್‌ಇಜಡ್, ದಕ್ಷಿಣ ಕನ್ನಡ, ಮಂಗಳೂರು, ಕರ್ನಾಟಕ- 574142 (''ಹರಾಜು ನಿವೇಶನ'') ಇಲ್ಲಿನ ಆವರಣದಲ್ಲಿದೆ. ಆಸ್ತಿಗೆ ಸಂಬಂಧಿಸಿತ ಹೆಚ್ಚಿನ ವಿವರಗಳಿಗಾಗಿ ಮತ್ತು ಹರಾಜಿನ ಷರತ್ತು ನಿಬಂಧನೆಗಳಿಗಾಗಿ ಕಾರ್ಪೊರೇಟ್ ಸಾಲಗಾರರ ವೆಬ್‌ಸೈಟ್ https://ksspetron.in/liquidation.html ನೋಡುವುದು.	ರೂ. 14,00,425/-	1,40,040/- ಅವಧಿ: 19.02.2022 ರಿಂದ 28.02.2022	20,000/- ಅಥವಾ ಮೇಲ್ಪಟ್ಟು

ಟಿಪ್ಪಣಿ:
1) ಇ-ಹರಾಜಿನ ಮಾರಾಟದ ಆಸ್ತಿಗಳನ್ನು ''ಎಲ್ಲಿ ಏನಿದೆಯೋ ಹಾಗೆಯೇ'' ''ಎಲ್ಲಿ ಹೇಗಿದೆಯೋ ಹಾಗೆಯೇ'' ಸ್ಥಿತಿ ಮತ್ತು ''ಇರುವುದೆಲ್ಲವೂ ಸೇರಿದಂತೆ ಹಾಗೆಯೇ'' ಮಾರಾಟ ಮಾಡಲಾಗುತ್ತದೆ.
2) ಕೆಎಸ್‌ಎಸ್ ಪೆಟ್ರಾನ್ ಪ್ರವೇಟ್ ಲಿಮಿಟೆಡ್ ಸಮಾಪನೆಯಲ್ಲಿ ಇವುಗಳ ಆಸ್ತಿಯೊಂದಿಗೆ ಜಂಟಿಯಾಗಿ ಇ-ಹರಾಜು ಮಾಡುವ ಇಚ್ಛೆಯೊಂದಿಗೆ ಈ ಸಾರ್ವಜನಿಕ ಸೂಚನೆಯನ್ನು ನೀಡಲಾಗಿದೆ. ಇವುಗಳು ಹರಾಜು ನಿವೇಶನದಲ್ಲಿ ಇದೆ. ನಿರೀಕ್ಷಿತ ಬಿಡ್‌ದಾರರು ಸಾರ್ವಜನಿಕ ಸೂಚನೆ ಮತ್ತು ಪಿಇಸಿಎಲ್ ನ ಆಸ್ತಿಯ ಸಂಬಂಧಿತ ಪ್ರಕ್ರಿಯಾ ದಾಖಲೆಗಳನ್ನು ಪ್ರಕ್ರಿಯೆಯ ನಿಗದಿತ ವೆಬ್‌ಸೈಟ್: http://petronengineering.com/ liquidation-process/liquidation-process. ರಲ್ಲಿ ನೋಡಬಹುದು.
3) ಯಾವುದೇ ರೀತಿಯ ಹೆಚ್ಚಿನ ಮಾಹಿತಿ ಅಥವಾ ಸ್ಪಷ್ಟೀಕರಣಕ್ಕಾಗಿ ದಯವಿಟ್ಟು ಸಮಾಪನದಾರ ಸಂಖ್ಯೆ ಸಂ. 011-49121644-45 ಅಥವಾ ತಂಡದ ಸದಸ್ಯರಾದ ಶ್ರೀ ಮಾನಿಸ್ ವ್ಯಾಸ್ + 91 9667090135 ಅಥವಾ ಶ್ರೀ ದಿವೇಶ್ ಅಹುಜ + 91 8860588209 ರವರನ್ನು ಸಂಪರ್ಕಿಸಿ.

ಕೆಎಸ್‌ಎಸ್ ಪೆಟ್ರೋನ್ ಪ್ರವೇಟ್ ಲಿಮಿಟೆಡ್ (ಸಮಾಪನೆಯಲ್ಲಿ) ಪರವಾಗಿ
ಸಹಿ/-
ಸಿಎಸ್ ವಿನೀತ್ ಕೆ ಚೌದರಿ
ಸಮಾಪನದಾರರು
ಕೆಎಸ್‌ಎಸ್ ಪೆಟ್ರೋನ್ ಪ್ರವೇಟ್ ಲಿಮಿಟೆಡ್ ವಿಷಯದಲ್ಲಿ
ಐಬಿಬಿಐ ನೋಂದಾವಣೆ ಸಂ. IBBI/IPA-002/IP-N00103/2017-18/10246
Ilquidatorksspetron@vkcindia.com (process specific)
ip.vineetchaudary@gmail.com (registered withIBBI)
ವಿಳಾಸ : ಐಬಿಬಿಐನೊಂದಿಗೆ ನೋಂದಾಯಿತರಾದ ಸಮಾಪನದಾರರ ವಿಳಾಸ
ಡಿ-38, ಎಲ್‌ಜಿಎಫ್ (ಎಲ್/ಎಸ್,) ಸೌತ್ ಎಕ್ಸ್‌ಟೆನ್ಷನ್, ಭಾಗ-II, ನವ ದೆಹಲಿ- 110049.
ದಿನಾಂಕ: 19.02.2022
ಸ್ಥಳ: ನವದೆಹಲಿ

ಇ-ಹರಾಜು ಸೂಚನೆ ಮತ್ತು ದಿವಾಳಿತನ ಮತ್ತು ಬ್ಯಾಂಕ್ರಪ್ಸಿ ಕೋಡ್, 2016ರಡಿ
ಕೆಎಸ್‌ಎಸ್ ಪೆಟ್ರೋನ್ ಪ್ರವೇಟ್ ಲಿಮಿಟೆಡ್ (ಸಮಾಪನೆ)
CIN: U45400MH2007PTC234297
ನೋಂದಾಯಿತ ಕಛೇರಿ: ಸ್ವಸ್ತಿಕ್ ಛೇಂಬರ್ಸ್, 6ನೇ ಮಹಡಿ, ಸಿಯಾನ್ ಟ್ರಾಂಬೆ ರಸ್ತೆ,
ಚೆಂಬೂರು, ಮುಂಬೈ, ಎಂಹೆಚ್ 400071.
ಹರಾಜಿನ ದಿನಾಂಕ ಮತ್ತು ಸಮಯ: 14.03.2022ರಂದು ಮಧ್ಯಾಹ್ನ 02:00 ರಿಂದ 04:00ರ ವರೆಗೆ
(ಜೊತೆಗೆ 5 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ)

ಕೆಎಸ್‌ಎಸ್ ಪೆಟ್ರೋನ್ ಪ್ರವೇಟ್ ಲಿಮಿಟೆಡ್ (ಕಾರ್ಪೊರೇಟ್ ಡೆಟರ್)- ಇದರ ಆಸ್ತಿಗಳ ಮಾರಾಟ ಸಮಾಪನದಾರರು, ಇವರಿಂದ ರಚಿತವಾದ ಸಮಾಪನ ಎಸ್ಟೇಟ್‌ನ ಒಂದು ಭಾಗ, ಸಮಾಪನದಾರರನ್ನು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯ ಮಂಡಳಿ ಇದರ 23.01.2020ರ ಆದೇಶದಂತೆ ನೇಮಕಗೊಂಡಿದ್ದಾರೆ. ಆಸ್ತಿಗಳ ಮಾರಾಟದ ಹರಾಜನ್ನು ಕೆಳಕಂಡ ಇ-ಹರಾಜು ವೇದಿಕೆ https://ncltauaction.auctiontiger.net ಮೂಲಕ ನಡೆಸಲಾಗುತ್ತವುದು. ಹರಾಜು ಮಾಡಬೇಕಿರುವ ಆಸ್ತಿಗಳ ವಿವರ ಅವುಗಳ ಮೀಸಲು ಬೆಲೆ, ಇಎಂಡಿ ಮತ್ತು ಬಿಡ್ ಹೆಚ್ಚಳದ ಮೊತ್ತ ಇವುಗಳನ್ನು ಕೆಳಕಂಡ ಪಟ್ಟಿಯಲ್ಲಿ ನೀಡಲಾಗಿದೆ.

ಆಸ್ತಿಗಳು	ಮೀಸಲು ಬೆಲೆ (ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ. ಗಳಲ್ಲಿ) ಸಲ್ಲಿಸಲು ಕಾಲಮಿತಿ	ಬಿಡ್ ಹೆಚ್ಚಳದ ಮೊತ್ತ (ರೂ.ಗಳಲ್ಲಿ)
ಕಾರ್ಪೊರೇಟರ್ ಸಾಲಗಾರರ ಆಸ್ತಿ ಜೆಬಿಎಫ್ ಇಂಡಸ್ಟ್ರೀಸ್ ಲಿ., ಪಿಟಿಎ ಪ್ಲಾಂಟ್ ಪ್ರಾಜೆಕ್ಟ್ ನಿವೇಶನ ಐಪಿ ಸಂ. 9, ಗ್ರಾಮ- ಬಜ್ಪೆ, ಮಂಗಳೂರು ಎಸ್‌ಇಜಡ್, ದಕ್ಷಿಣ ಕನ್ನಡ, ಮಂಗಳೂರು, ಕರ್ನಾಟಕ- 574142 (''ಹರಾಜು ನಿವೇಶನ'') ಇಲ್ಲಿನ ಆವರಣದಲ್ಲಿದೆ. ಆಸ್ತಿಗೆ ಸಂಬಂಧಿಸಿತ ಹೆಚ್ಚಿನ ವಿವರಗಳಿಗಾಗಿ ಮತ್ತು ಹರಾಜಿನ ಷರತ್ತು ನಿಬಂಧನೆಗಳಿಗಾಗಿ ಕಾರ್ಪೊರೇಟ್ ಸಾಲಗಾರರ ವೆಬ್‌ಸೈಟ್ https://petronengineering.com/liquidation-process/liquidation-process ಅನ್ನು ನೋಡುವುದು.	ರೂ. 1,10,57,638/-	11,05,765/- ಅವಧಿ: 19.02.2022 ರಿಂದ 28.02.2022	20,000/- ಅಥವಾ ಮೇಲ್ಪಟ್ಟು

ಟಿಪ್ಪಣಿ:
1) ಇ-ಹರಾಜಿನ ಮಾರಾಟದ ಆಸ್ತಿಗಳನ್ನು ''ಎಲ್ಲಿ ಏನಿದೆಯೋ ಹಾಗೆಯೇ'' ''ಎಲ್ಲಿ ಹೇಗಿದೆಯೋ ಹಾಗೆಯೇ'' ಸ್ಥಿತಿ ಮತ್ತು ''ಇರುವುದೆಲ್ಲವೂ ಸೇರಿದಂತೆ ಹಾಗೆಯೇ'' ಮಾರಾಟ ಮಾಡಲಾಗುತ್ತದೆ.
2) ಕೆಎಸ್‌ಎಸ್ ಪೆಟ್ರಾನ್ ಪ್ರವೇಟ್ ಲಿಮಿಟೆಡ್ ಸಮಾಪನೆಯಲ್ಲಿ ಇವುಗಳ ಆಸ್ತಿಯೊಂದಿಗೆ ಜಂಟಿಯಾಗಿ ಇ-ಹರಾಜು ಮಾಡುವ ಇಚ್ಛೆಯೊಂದಿಗೆ ಈ ಸಾರ್ವಜನಿಕ ಸೂಚನೆಯನ್ನು ನೀಡಲಾಗಿದೆ. ಇವುಗಳು ಹರಾಜು ನಿವೇಶನದಲ್ಲಿ ಇದೆ. ನಿರೀಕ್ಷಿತ ಬಿಡ್‌ದಾರರು ಸಾರ್ವಜನಿಕ ಸೂಚನೆ ಮತ್ತು ಕೆಎಸ್‌ಎಸ್ ನ ಆಸ್ತಿಯ ಸಂಬಂಧಿತ ಪ್ರಕ್ರಿಯಾ ದಾಖಲೆಗಳನ್ನು ಪ್ರಕ್ರಿಯೆಯ ನಿಗದಿತ ವೆಬ್‌ಸೈಟ್: http://ksspetron.in/liquidation.html.ರಲ್ಲಿ ನೋಡಬಹುದು.
3) ಯಾವುದೇ ರೀತಿಯ ಹೆಚ್ಚಿನ ಮಾಹಿತಿ ಅಥವಾ ಸ್ಪಷ್ಟೀಕರಣಕ್ಕಾಗಿ ದಯವಿಟ್ಟು ಸಮಾಪನದಾರ ಸಂಖ್ಯೆ ಸಂ. 011-49121644-45 ಅಥವಾ ತಂಡದ ಸದಸ್ಯರಾದ ಶ್ರೀ ದಿವೇಶ್ ಅಹುಜ + 91 8860588209 ಅಥವಾ ಶ್ರೀ ಮಾನಿಸ್ ವ್ಯಾಸ್ + 91 9667090135 ರವರನ್ನು ಸಂಪರ್ಕಿಸಿ.

ಪೆಟ್ರೋನ್ ಇಂಜಿನಿಯರಿಂಗ್ ಕನ್‌ಸ್ಟ್ರಕ್ಷನ್ ಲಿಮಿಟೆಡ್ (ಸಮಾಪನೆಯಲ್ಲಿ) ಪರವಾಗಿ
ಸಹಿ/-
ಸಿಎಸ್ ವಿನೀತ್ ಕೆ ಚೌದರಿ
ಸಮಾಪನದಾರರು
ಪೆಟ್ರೋನ್ ಇಂಜಿನಿಯರಿಂಗ್ ಕನ್‌ಸ್ಟ್ರಕ್ಷನ್ ಲಿಮಿಟೆಡ್ ವಿಷಯದಲ್ಲಿ
ಐಬಿಬಿಐ ನೋಂದಾವಣೆ ಸಂ. IBBI/IPA-002/IP-N00103/2017-18/10246
Ilquidatorksspetron@vkcindia.com (process specific)
ip.vineetchaudary@gmail.com (registered withIBBI)
ವಿಳಾಸ : ಐಬಿಬಿಐನೊಂದಿಗೆ ನೋಂದಾಯಿತರಾದ ಸಮಾಪನದಾರರ ವಿಳಾಸ
ಡಿ-38, ಎಲ್‌ಜಿಎಫ್ (ಎಲ್/ಎಸ್,) ಸೌತ್ ಎಕ್ಸ್‌ಟೆನ್ಷನ್, ಭಾಗ-II, ನವ ದೆಹಲಿ- 110049.
ದಿನಾಂಕ: 19.02.2022
ಸ್ಥಳ: ನವದೆಹಲಿ